ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿರುತ್ತದೆ.)

ಅಧಿಸೂಚನೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052 ರವರ ಸಮ್ಮುಖದಲ್ಲಿ

ಸಂಖ್ಯೆ: ಹೆಸ್ಕಾಂ/ನಿ(ಹ)/ನಿ/ಉಲೆನಿ/ಲೆ(ನಿವ್ಯ)/2025–26/CYS-5416, ದಿನಾಂಕ: 11.09.2025

ಗೌರವಾನ್ವಿತ ಆಯೋಗದ ಮುಂದೆ RP08/2025-ನೀರಾವರಿ ಪಂಪ್ ಸೆಟ್‌ಗಳು, ವಾಣಿಜ್ಯ ಮತ್ತು ಕೈಗಾರಿಕಾ ಜಕಾತಿ ವರ್ಗಗಳ ಜಕಾತಿ ದರ ಬದಲಾವಣೆಗಾಗಿ ಅರ್ಜಿ ಸಲ್ಲಿಕೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹುವಿಸಕಂನಿ)

ನವನಗರ, ಹುಬ್ಬಳ್ಳಿ–580025. ಮತ್ತು ಇತರೆ ಎಸ್ಕಾಂಗಳು ----ಅರ್ಜಿದಾರರು

ಪ್ರಕಟಣೆ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು (ಹುವಿಸಕಂನಿ) ಮತ್ತು ಇತರೆ ಎಸ್ಕಾಂಗಳು ಮಾನ್ಯ ಆಯೋಗದ ಮುಂದೆ ನೀರಾವರಿ ಪಂಪ್ ಸೆಟ್‌ಗಳು, ವಾಣಿಜ್ಯ ಮತ್ತು ಕೈಗಾರಿಕಾ ಜಕಾತಿ ವರ್ಗಗಳ ಜಕಾತಿ ದರ ಮಾರ್ಪಾಡಿಗಾಗಿ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಿದೆ.

ಅರ್ಜಿಯ ವಿವರಗಳು ಹೀಗಿದೆ:

ಕರ್ನಾಟಕ ಸರ್ಕಾರವು **ದಿನಾಂಕ 07–03–2025** ರಂದು ಘೋಷಿಸಲಾದ 2025–26ನೇ ಹಣಕಾಸು ವರ್ಷದ ಬಜೆಟ್‌ನಲ್ಲಿ ಐಪಿ ಸೆಟ್‌ಗೆ ಸಬ್ಸಿಡಿಯಾಗಿ ರೂ. 16,021 ಕೋಟಿಗಳನ್ನು ನಿಗದಿಪಡಿಸಿತ್ತು.

ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು **27–03–2025** ರಂದು 2025–26ನೇ ಹಣಕಾಸು ವರ್ಷಕ್ಕೆ ಜಾರಿಗೆ ಬರುವಂತೆ ಜಕಾತಿ ಆದೇಶ–2025 ಅನ್ನು ಹೊರಡಿಸಿದೆ. ಜಕಾತಿ ಆದೇಶದಲ್ಲಿ, ಐಪಿ ಸೆಟ್ ಬಳಕೆಗೆ ನಿಗದಿಪಡಿಸಿದ ಜಕಾತಿಯು ಪ್ರತಿ ಯೂನಿಟ್‌ಗೆ ರೂ. 8.30 ಆಗಿದ್ದು, ಹಿಂದಿನ ವರ್ಷ ಪ್ರತಿ ಯೂನಿಟ್ ದರವು ರೂ. 6.81 ಆಗಿರುತ್ತದೆ. ಜಕಾತಿ ಆದೇಶ–2025 ರ ಪರಿಣಾಮ ಎಲ್ಲಾ ಎಸ್ಕಾಂ ಗಳಿಗೆ ಐಪಿ ಸೆಟ್ ವರ್ಗಕ್ಕೆ ಒಟ್ಟು ರೂ. 20,640 ಕೋಟಿ ಸಬ್ಸಿಡಿ ಅವಶ್ಯಕತೆಯಿರುತ್ತದೆ. ಹಾಗಾಗಿ, ಬಜೆಟ್ ನಲ್ಲಿನ ಹಂಚಿಕೆಯು ಕಡಿಮೆಯಿದ್ದು, ಎಸ್ಕಾಂಗಳಿಗೆ ನೀಡುವ ಸಬ್ಸಿಡಿಯಲ್ಲಿ ಕೊರತೆ ಉಂಟಾಗುತ್ತದೆ.

ಘನ ಕರ್ನಾಟಕ ಸರ್ಕಾರವು ಪ್ರತಿ ವರ್ಷವೂ ಕೃಷಿ ಗ್ರಾಹಕರಿಗೆ ವಾಡಿಕೆಯಂತೆ ಸಹಾಯಧನವನ್ನು ಘೋಷಿಸುತ್ತಿದೆ. ಆ.ವ–26 ಕ್ಕೆ, ಸರ್ಕಾರ ರಾಜ್ಯ ಬಜೆಟ್‌ನಲ್ಲಿ ಐಪಿ ಸೆಟ್ ಸಬ್ಸಿಡಿಯಾಗಿ ರೂ. 16,021 ಕೋಟಿಗಳನ್ನು ಘೋಷಿಸಿದೆ. ರಾಜ್ಯ ಬಜೆಟ್ ನಿಬಂಧನೆಗಳನ್ನು ಮೊದಲಿಗೆ ಹಣಕಾಸು ಮಸೂದೆಯಲ್ಲಿ ಮತ್ತು ನಂತರ ಹಣಕಾಸು ಕಾಯ್ದೆಯಲ್ಲಿ ಸೇರಿಸಲಾಗಿದ್ದು, ಜಕಾತಿಯನ್ನು ನಿರ್ಧರಿಸುವಾಗ ಮತ್ತು ಘೋಷಿಸುವಾಗ, ಗೌರವಾನ್ವಿತ ಆಯೋಗವು ರಾಜ್ಯ ಬಜೆಟ್ ಅನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ಕೃಷಿ ಗ್ರಾಹಕರಿಗೆ ಸರ್ಕಾರವು ನೀಡಿದ ಬಜೆಟ್ ಹಂಚಿಕೆಯನ್ನು ಆಯೋಗವು ಪರಿಗಣಿಸದಿರುವ ಹಿನ್ನೆಲೆಯಲ್ಲಿ, ಕೃಷಿ ಗ್ರಾಹಕರಿಗೆ ಜಕಾತಿಯನ್ನು ಅರ್ಜಿದಾರರು ಮಾಡಿದ ಪ್ರಸ್ತಾಪಗಳಿಗಿಂತ ಹೆಚ್ಚಿನದಾಗಿ ನಿಗದಿಪಡಿಸಲಾಗಿದೆ.

ಜಕಾತಿ ಆದೇಶ 2025 ರ ಐಪಿ ಸೆಟ್ ಜಕಾತಿಯ ಹೆಚ್ಚಳದಿಂದಾಗಿ, ಸರ್ಕಾರವು ಭರಿಸಬೇಕಾದ ಸಬ್ಸಿಡಿ ಮೊತ್ತದಲ್ಲಿ ತೀವ್ರ ಹೆಚ್ಚಳವಾಗಿದ್ದು, ಈ ಹೆಚ್ಚಳದಿಂದಾಗಿ ಜಕಾತಿ ಆದೇಶ 2025 ರ ಪರಿಶೀಲನೆಯು ಅವಶ್ಯಕವಾಗಿದೆ. ಐಪಿ ಸೆಟ್ ವರ್ಗಕ್ಕೆ ಆಯೋಗದ ಜಕಾತಿ ಆದೇಶವನ್ನು ಜಾರಿಗೊಳಿಸಿದಾಗ ಉಂಟಾಗುವ ಒಟ್ಟು ವೆಚ್ಚದ ಮೇಲಿನ ಆದಾಯ ಕೊರತೆಯನ್ನು, ಬಜೆಟ್‌ನಲ್ಲಿ ಒದಗಿಸದ ಕಾರಣ ಎಸ್ಕಾಂಗಳಿಗೆ ಈ ಕೊರತೆಯನ್ನು ಪೂರೈಸಲು ಸಾಧ್ಯವಾಗುವುದಿಲ್ಲ ಹಾಗೂ ಅರ್ಜಿದಾರರು ಸರ್ಕಾರದಿಂದ ಅಥವಾ ಗ್ರಾಹಕರಿಂದ ಈ ಕೊರತೆಯನ್ನು ಪಡೆಯಲು ಸಾಧ್ಯವಿಲ್ಲ. ಆದ್ದರಿಂದ, RP-08/2025 ಅರ್ಜಿಯನ್ನು ಜಕಾತಿ ಆದೇಶ 2025ರ ಮಾರ್ಪಾಡು/ತಿದ್ದುಪಡಿಗಾಗಿ ಸಲ್ಲಿಸಲಾಗಿದೆ.

ಜಕಾತಿ ಆದೇಶ 2024 ರಲ್ಲಿ ಸರಾಸರಿ ಸರಬರಾಜು ವೆಚ್ಚಕ್ಕೆ, LT4a ವರ್ಗದ ಕ್ರಾಸ್ ಸಬ್ಸಿಡಿಯನ್ನು 24.67% ರಷ್ಟು ಒದಗಿಸಲಾಗಿದೆ. ಜಕಾತಿ ಆದೇಶ 2025 ರಲ್ಲಿ ಕ್ರಮವಾಗಿ ಆರ್ಥಿಕ ವರ್ಷ 26 ಕ್ಕೆ 6.53% ಮತ್ತು ಆರ್ಥಿಕ ವರ್ಷ 27 ಕ್ಕೆ 3.82% ರಷ್ಟು ಕ್ರಾಸ್ ಸಬ್ಸಿಡಿಯನ್ನು ಒದಗಿಸಲಾಗಿದೆ. ಹಣಕಾಸು ವರ್ಷ 28 ಕ್ಕೆ, ಗೌರವಾನ್ವಿತ ಆಯೋಗವು LT4a ವರ್ಗದ ಕ್ರಾಸ್ ಸಬ್ಸಿಡಿಯನ್ನು ಸಂಪೂರ್ಣವಾಗಿ ತೆಗೆದುಹಾಕುವ ಗುರಿಯನ್ನು ಹೊಂದಿರುತ್ತದೆ.

ಮುಂದುವರೆದು, ಜಕಾತಿ ಆದೇಶ–2025 ವು ವಿವಿಧ ಜಕಾತಿ ವರ್ಗಗಳಿಗೆ ಬದಲಾವಣೆಗಳನ್ನು ಮಾಡಿದೆ. ಗಮನಾರ್ಹವಾಗಿ, ಕೆಲವು ಸರ್ಕಾರಿ ಸ್ಥಾವರಗಳ ಜಕಾತಿ ದರಗಳನ್ನು ಬದಲಾಯಿಸದೆ, ಇತರೆ ವರ್ಗಗಳ ಜಕಾತಿ ದರಗಳನ್ನು ಬದಲಾಯಿಸಲಾಗಿದೆ. ಈ ಕೆಳಗಿನ ವರ್ಗಗಳನ್ನು ಹಳೆಯ ಜಕಾತಿ ದರಗಳಲ್ಲಿಯೇ ಉಳಿಸಿಕೊಳ್ಳಲಾಗಿದೆ:

LT6: ನೀರು ಸರಬರಾಜು	LT6: ಬೀದಿ ದೀಪ
LT6: EV ಸ್ಥಾಪನೆಗಳು	HT1: ನೀರು ಸರಬರಾಜು ಸ್ಥಾಪನೆಗಳು
HT6: ನೀರಾವರಿ ಮತ್ತು ಕೃಷಿ ಜಮೀನುಗಳು	HT7: ಸರ್ಕಾರಿ ಏತ ನೀರಾವರಿ

ಸರ್ಕಾರಿ ಸ್ಥಾವರಗಳಾಗಿರುವ ಈ ವರ್ಗಗಳನ್ನು ಜಕಾತಿ ಆದೇಶ 2024 ರ ಜಕಾತಿಯಲ್ಲಿಯೇ ಉಳಿಸಿಕೊಳ್ಳಲಾಗಿದೆ. ಕೃಷಿ ಮತ್ತು ಸರ್ಕಾರಿ ಸ್ಥಾವರಗಳು, ವಾಣಿಜ್ಯ ಮತ್ತು ಕೈಗಾರಿಕಾ ವರ್ಗದ ಗ್ರಾಹಕರಿಂದ ಕ್ರಾಸ್ ಸಬ್ಸಿಡಿ ಪಡೆಯುತ್ತಿದ್ದು, ಈ ವರ್ಗಗಳಿಗೆ ಕ್ರಾಸ್ ಸಬ್ಸಿಡಿ ಹೊರೆಯನ್ನು ಕಡಿಮೆ ಮಾಡಲು ಕೃಷಿ ಜಕಾತಿಯನ್ನು ಮಾತ್ರ ತೀವ್ರವಾಗಿ ಹೆಚ್ಚಿಸಲಾಗಿದೆ.

LT-4(a) ವರ್ಗಕ್ಕೆ ಆಯೋಗದ ಜಕಾತಿ ಆದೇಶವನ್ನು ಜಾರಿಗೆ ತಂದರೆ, ಒಟ್ಟು ವೆಚ್ಚವನ್ನು ಬಜೆಟ್‌ನಲ್ಲಿ ಒದಗಿಸದ ಕಾರಣ ಎಸ್ಕಾಂಗಳು ಆದಾಯದಲ್ಲಿನ ಈ ಕೊರತೆಯನ್ನು ಪೂರೈಸಲು ಸಾಧ್ಯವಿರುವುದಿಲ್ಲ. ಅರ್ಜಿದಾರರು ಸರ್ಕಾರದಿಂದ ಅಥವಾ ಗ್ರಾಹಕರಿಂದ ಈ ಕೊರತೆಯನ್ನು ಮರುಪಡೆಯಲು ಸಾಧ್ಯವಿರುವುದಿಲ್ಲ. ಆದ್ದರಿಂದ, ಎಸ್ಕಾಂಗಳು ಈ ಕೆಳಗಿನ ಆಧಾರದ ಮೇಲೆ ಮಾರ್ಪಾಡು/ತಿದ್ದುಪಡಿಗಾಗಿ ಅರ್ಜಿಯನ್ನು ಸಲ್ಲಿಸಿವೆ.

1. ವಿದ್ಯುತ್ ಕಾಯ್ದೆಯ 2003 ರ ವಿಭಾಗ 64(6) ರ ಪ್ರಕಾರ

A tariff order shall, unless amended or revoked, continue to be in force for such period as may be specified in the tariff order.
ಕಾಯ್ದೆಯ ಮೇಲಿನ ನಿಬಂಧನೆಯ ಪ್ರಕಾರ, ಆಯೋಗವು ಪ್ರಸ್ತುತ ಜಕಾತಿ ಆದೇಶದ ಅವಧಿಗೆ ತಿದ್ದುಪಡಿ ಮಾಡಲು ಅಥವಾ ಮಾರ್ಪಡಿಸಲು ಅಧಿಕಾರ ಹೊಂದಿದೆ.

2. ಕೆಇಆರ್‌ಸಿ (ನಡವಳಿಕೆ ಮತ್ತು ನಡಾವಳಿಗಳು) ನಿಯಮ 2000 ರ ನಿಬಂಧನೆ 8 ಅನ್ನು ಕೆಳಗೆ ಓದಲಾಗಿದೆ

(1) The Commission may, either on its own motion or on an application made by any interested or affected party, within 90 days of the making or issuing of any decision, direction, order, notice or other document or the taking of any action in pursuance of these Regulations, review, revoke, revise, modify, amend, alter or otherwise change such decision, direction, order, notice or other document issued or action taken by the Commission or any of its Officers.
(2) An application under sub-regulation (1) shall be filed in the same manner as a Petition under Chapter-II of these Regulations.
ಮೇಲಿನ ನಿಯಮದ ಪ್ರಕಾರ, LT-4(a) ವರ್ಗದ ಜಕಾತಿಯನ್ನು ಪರಿಶೀಲಿಸಲು, ಪರಿಷ್ಕರಿಸಲು, ಮಾರ್ಪಡಿಸಲು, ತಿದ್ದುಪಡಿ ಮಾಡಲು ಮತ್ತು ಸರ್ಕಾರವು ಈ ವರ್ಗಕ್ಕೆ ಒದಗಿಸುತ್ತಿರುವ ಸಬ್ಸಿಡಿಯನ್ನು ಸರಿಯಾಗಿ ಗಮನಿಸಿದ ನಂತರ ಅದರ ಜಕಾತಿ ದರವನ್ನು ಕಡಿಮೆ ಮಾಡಲು ಆಯೋಗವು ಅಧಿಕಾರ ಹೊಂದಿದೆ.

3. 1908 ರ ನಾಗರಿಕ ಕಾರ್ಯವಿಧಾನ ಸಂಹಿತೆಯ ಪ್ರಕಾರ, ಆಯೋಗವು 2025 ರಲ್ಲಿ LT-4(a) ವರ್ಗದ ಜಕಾತಿಯನ್ನು ನಿಗದಿಪಡಿಸುವಾಗ, ಕರ್ನಾಟಕ ಕಾಯ್ದೆ 21 ರಡಿಯಲ್ಲಿ ರಾಜ್ಯವು ಮಾಡಿದ ಬಜೆಟ್ ಪ್ರಸ್ತಾವನೆಯನ್ನು ಪರಿಗಣಿಸದೇ ಜಕಾತಿಯನ್ನು ನಿರ್ಧರಿಸಿರುತ್ತಾರೆ. ಈ ನಿರ್ಧಾರವನ್ನು ಸೆಕ್ಷನ್ 94(1)(F) ಅಡಿಯಲ್ಲಿ ಪರಿಶೀಲಿಸಲು ಆಯೋಗಕ್ಕೆ ಅಧಿಕಾರವಿರುತ್ತದೆ.

4. ವಿದ್ಯುತ್ ಕಾಯ್ದೆ, 2003 ರ ಸೆಕ್ಷನ್ 175 ಈ ಕೆಳಗಿನಂತೆ ಒದಗಿಸುತ್ತದೆ

The provisions of this Act are in addition to and not in derogation of any other law for the time being in force.
LT-4A ಕೃಷಿ ಸ್ಥಾವರಗಳಿಗೆ ಸಬ್ಸಿಡಿ ನೀಡಲು ಹೆಚ್ಚುವರಿ ಬಜೆಟ್ ಬೆಂಬಲವನ್ನು ಹಂಚಿಕೆ ಮಾಡುವಂತೆ ಎಸ್ಕಾಂಗಳು ಕರ್ನಾಟಕ ಸರ್ಕಾರವನ್ನು ಕೋರಿದ್ದವು. ಸರ್ಕಾರಿ ಮಟ್ಟದಲ್ಲಿ ನಡೆದ ಸಭೆಯಲ್ಲಿ, ಜಕಾತಿ ಆದೇಶ–25 ರಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಸ್ಥಾಪನೆಗಳ ರೀಟೈಲ್ ಜಕಾತಿ ದರಗಳನ್ನು ಕಡಿಮೆ ಮಾಡಿರುವುದನ್ನು ಮತ್ತು IP ಸೆಟ್‌ಗಳ ಜಕಾತಿ ದರಗಳನ್ನು ಹೆಚ್ಚಿಸಿರುವುದನ್ನು ಗಮನಿಸಲಾಗಿದ್ದು, ಆ.ವ–28 ರಲ್ಲಿ ಕೃಷಿ ಗ್ರಾಹಕರ ಕ್ರಾಸ್ ಸಬ್ಸಿಡಿಯಲ್ಲಿ ತೀವ್ರ ಇಳಿಕೆ ಕಂಡುಬಂದಿರುತ್ತದೆ ಮತ್ತು ಕ್ರಾಸ್ ಸಬ್ಸಿಡಿಯನ್ನು ತೆಗೆದುಹಾಕಲಾಗಿದೆ ಎಂದು ಗಮನಿಸಲಾಯಿತು. ಆದ ಕಾರಣ ಆದಾಯ ತಟಸ್ಥತೆ (neutrality) ಯನ್ನು ಸಾಧಿಸಲು, ಕೈಗಾರಿಕಾ ಮತ್ತು ವಾಣಿಜ್ಯ ವರ್ಗಗಳ ಜಕಾತಿಯನ್ನು ಹೆಚ್ಚಿಸಲು ಕೋರಲಾಗಿತ್ತು. ಎಸ್ಕಾಂಗಳೊಂದಿಗೆ ಹೆಚ್ಚಿನ ಆದಾಯದ ಗ್ರಾಹಕರನ್ನು ಉಳಿಸಿಕೊಳ್ಳಲು, ಕರ್ನಾಟಕ ಸರ್ಕಾರವು 10HP ಗಿಂತ ಕಡಿಮೆ ಸಾಮರ್ಥ್ಯದ ನೀರಾವರಿ ಪಂಪ್ ಸೆಟ್‌ಗಳಿಗೆ ಸಬ್ಸಿಡಿ ವಿದ್ಯುತ್ ಒದಗಿಸಲು 2362.47 ಕೋಟಿ ರೂ.ಗಳ ಹೆಚ್ಚುವರಿ ಅನುದಾನವನ್ನು ಘೋಷಿಸಿ, ನೀಡುವುದಾಗಿ ಹೇಳಿದೆ.

ನೀರಾವರಿ ಪಂಪ್ ಸೆಟ್ ಜಕಾತಿ ದರದ ಕಡಿತದಿಂದ ಉಂಟಾಗುವ ಆರ್ಥಿಕ ಅಂತರವನ್ನು ಈ ಕೆಳಗಿನ ಕ್ರಮಗಳ ಮೂಲಕ ತುಂಬಲು ಹೆಸ್ಕಾಂ ಮತ್ತು ಇತರೆ ಎಸ್ಕಾಂಗಳು ಅರ್ಜಿಯಲ್ಲಿ ಪ್ರಸ್ತಾಪಿಸಿವೆ:

i. ಈಗಿನ ಐಪಿ ಸೆಟ್ ಜಕಾತಿಯನ್ನು ಪ್ರತಿ ಯೂನಿಟ್‌ಗೆ ರೂ. 8.30 ರಿಂದ ರೂ. 7.35 ಕ್ಕೆ ಇಳಿಸಬಹುದು, ರಾಜ್ಯವು ಇದರಿಂದಾಗಿ ರಾಜ್ಯದ ಇತರ ಆದಾಯದ ಅವಶ್ಯಕತೆಗಳ ಮೇಲೆ ಅನಗತ್ಯ ಒತ್ತಡವಿಲ್ಲದೆ ಹೆಚ್ಚುವರಿ ಸಬ್ಸಿಡಿಯನ್ನು ಒದಗಿಸಬಹುದು. ಐಪಿ ಸೆಟ್ ಜಕಾತಿಯನ್ನು ರೂ. 7.35 ಕ್ಕೆ ಇಳಿಸುವುದರಿಂದ ಜಕಾತಿ ಆದೇಶದಲ್ಲಿ ಪರಿಗಣಿಸಲಾದ ಜಕಾತಿ ದರಗಳಿಗೆ ಹೋಲಿಸಿದರೆ ರೂ. 2362.47 ಕೋಟಿಗಳಷ್ಟು ಕೊರತೆ ಉಂಟಾಗುತ್ತದೆ.

ii. ಕೆಳಗಿನ ಕೋಷ್ಟಕದ ಪ್ರಕಾರ ವಾಣಿಜ್ಯ ಮತ್ತು ಕೈಗಾರಿಕಾ ಸ್ಥಾಪನೆಗಳ ಜಕಾತಿಯನ್ನು ಪ್ರಮಾಣಾನುಗುಣವಾಗಿ ಹೆಚ್ಚಿಸಿದಲ್ಲಿ, ಎಸ್ಕಾಂಗಳ ಆದಾಯ ರೂ. 1,214.12 ಕೋಟಿಗಳಷ್ಟು ಹೆಚ್ಚುತ್ತದೆ.

iii. ಜಕಾತಿ ಆದೇಶದ ಪ್ರಕಾರ ಹಿಂದಿನ ವರ್ಷಕ್ಕೆ ಹೋಲಿಸಿದರೆ ವಿವಿಧ ಮೂಲಗಳಿಂದ ಬರುವ ಹೆಚ್ಚುವರಿ ಆದಾಯಗಳಾದ ಬಾಕಿ ಮೇಲಿನ ಬಡ್ಡಿ, ಕ್ರಾಸ್ ಸಬ್ಸಿಡಿ ಸರ್‌ಚಾರ್ಜ್, FPPCA, ವೀಲಿಂಗ್ ಶುಲ್ಕಗಳು ಇತ್ಯಾದಿಗಳನ್ನು ರೂ. 1148.35 ಕೋಟಿಗಳವರೆಗೆ ಪರಿಗಣಿಸಬಹುದು.

ಆದ್ದರಿಂದ, ದರ ಪರಿಷ್ಕರಣೆ ಅಗತ್ಯವಾಗಿದೆ. ಹೆಸ್ಕಾಂ ಮತ್ತು ಇತರೆ ಎಸ್ಕಾಂಗಳು ಪ್ರಸ್ತಾವಿತ ದರ ಪರಿಷ್ಕರಣೆಯಿಂದ ಹಣಕಾಸು ವರ್ಷ–26 ರಲ್ಲಿ ಚೇತರಿಸಿಕೊಳ್ಳಲು ಯೋಜಿಸಿದೆ.

ಜಕಾತಿ ಪ್ರವರ್ಗಗಳು	ಜಕಾತಿ ಆದೇಶ–2024		ಜಕಾತಿ ಆದೇಶ–2025		ಪರಿಷ್ಕರಣಾ ಜಕಾತಿ ದರಗಳು (ಆಯ್ಕೆ–2)		ಜ.ಆ–2025 ರ ವಿರುದ್ಧ ಆಯ್ಕೆ 2 ಅನ್ನು ಪರಿಗಣಿಸಿದರೆ ಆದಾಯದಲ್ಲಿ ಹೆಚ್ಚಳ/ಇಳಿಕೆ
	ನಿಗದಿತ ಶುಲ್ಕ ರೂ.ಗಳಲ್ಲಿ	ವಿದ್ಯುತ್ ಬಳಕೆ ಶುಲ್ಕ ರೂ.ಗಳಲ್ಲಿ	ನಿಗದಿತ ಶುಲ್ಕ ರೂ.ಗಳಲ್ಲಿ	ವಿದ್ಯುತ್ ಬಳಕೆ ಶುಲ್ಕ ರೂ.ಗಳಲ್ಲಿ	ನಿಗದಿತ ಶುಲ್ಕ ರೂ.ಗಳಲ್ಲಿ	ವಿದ್ಯುತ್ ಬಳಕೆ ಶುಲ್ಕ ರೂ.ಗಳಲ್ಲಿ	ಮೊತ್ತ ಕೋಟಿ ರೂ.ಗಳಲ್ಲಿ
ಎಲ್.ಟಿ–4 (ಎ) ಐಪಿ<10 ಹೆಚ್.ಪಿ.		**6.81**		**8.30**		**7.35**	**-2,362.47**
ಎಲ್.ಟಿ–3(ಎ) ವಾಣಿಜ್ಯ	210/220	8.00	215	7.00	235.00	7.10	207.21
ಎಲ್.ಟಿ–5 ಕೈಗಾರಿಕೆ	140/190	6.10	150	4.50	165.00	5.20	303.20
ಹೆಚ್.ಟಿ–2(ಎ) ಕೈಗಾರಿಕೆ	340	6.90	345	6.60	365.00	6.70	262.85
ಹೆಚ್.ಟಿ–2(ಬಿ) ವಾಣಿಜ್ಯ	365	8.00	370	5.95	390.00	6.90	440.86
ಒಟ್ಟು (ಕೈ ಮತ್ತು ವಾ)							**1,214.12**
ಇತರೆ ಹೆಚ್ಚುವರಿ ಆದಾಯ							**1148.35**

ಮೇಲಿನ ಕೋಷ್ಟಕದಿಂದ LT-4(a) ಜಕಾತಿಯನ್ನು ಪ್ರತಿ ಯೂನಿಟ್‌ಗೆ ರೂ.7.35 ಕ್ಕೆ ಇಳಿಸಿದರೆ, ಅದು ಎಸ್ಕಾಂಗಳ ಆದಾಯದಲ್ಲಿ ರೂ.2,362.47 ಕೋಟಿಗಳಷ್ಟು ಇಳಿಕೆಗೆ ಕಾರಣವಾಗುತ್ತದೆ ಎಂದು ಗಮನಿಸಬಹುದು ಹಾಗೂ ಮೇಲೆ ಸೂಚಿಸಿದಂತೆ ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರ ಜಕಾತಿಯನ್ನು ರೂ.1214.12 ಕೋಟಿಗಳಷ್ಟು ಹೆಚ್ಚಿಸುವ ಮೂಲಕ ಮತ್ತು ರೂ.1148.35 ಕೋಟಿಗಳಷ್ಟು ಹೆಚ್ಚುವರಿ ಇತರ ಆದಾಯವನ್ನು ಪರಿಗಣಿಸುವ ಮೂಲಕ ಈ ಕೊರತೆಯನ್ನು ಸರಿದೂಗಿಸಲು ಪ್ರಸ್ತಾಪಿಸಲಾಗಿದೆ. ಮೇಲಿನ ಪ್ರಸ್ತಾವಿತ ಪರಿಷ್ಕರಣೆಗಳ ಹೊರತಾಗಿಯೂ, ಕೈಗಾರಿಕಾ ಮತ್ತು ವಾಣಿಜ್ಯ ಗ್ರಾಹಕರ ಜಕಾತಿಯು, ಜಕಾತಿ ಆದೇಶ–2024 ರಿಂದ ಗಣನೀಯವಾಗಿ ಕಡಿಮೆಯಾಗಿದೆ ಎಂಬುದು ನಿರ್ಣಾಯಕ ಅಂಶವಾಗಿದೆ.

1. ಆಯೋಗದ ಮುಂದೆ ಸಲ್ಲಿಸಲಾದ ಅರ್ಜಿಯು **ಹೆಸ್ಕಾಂ ಮತ್ತು ಇತರೆ ಎಸ್ಕಾಂಗಳ ವೆಬ್‌ಸೈಟ್‌ನಲ್ಲಿ** ಲಭ್ಯವಿದೆ

2. ಇದಲ್ಲದೆ, ಅರ್ಜಿಯ ಮುದ್ರಿತ ಪ್ರತಿ ನಿಯಂತ್ರಣಾಧಿಕಾರಿ (ಲೆ ಮತ್ತು ಹ), ನಿಗಮ ಕಚೇರಿ, ಹೆಸ್ಕಾಂ, ನವನಗರ, ಹುಬ್ಬಳ್ಳಿ–580025 ಇಲ್ಲಿ ಲಭ್ಯವಿದೆ

3. ಪರಿಶೀಲನಾ ಅರ್ಜಿ RP-08/2025 ರಲ್ಲಿ KERC ನಿರ್ದೇಶನಗಳ ಅನುಸಾರ, ಮೇಲಿನ ಅರ್ಜಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಆಸಕ್ತಿ ಹೊಂದಿರುವ ವ್ಯಕ್ತಿಗಳು **ಖ್ಚೀಕರಿಸುವ ಅಧಿಕಾರಿ, ಕಾರ್ಯದರ್ಶಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ನಂ.16, C-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052** ಅವರಿಗೆ ಮೂರು ಸೆಟ್‌ಗಳಲ್ಲಿ, ಈ ಅಧಿಸೂಚನೆಯ ಮೊದಲ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಅಫಿಡವಿಟ್‌ನಿಂದ ಸರಿಯಾಗಿ ಬೆಂಬಲಿತವಾದ ದಾಖಲೆಗಳೊಂದಿಗೆ ಸಲ್ಲಿಸಬಹುದು ಮತ್ತು ಅವರು ವೈಯಕ್ತಿಕವಾಗಿ ವಿಚಾರಣೆಗೆ ಒಳಗಾಗಲು ಬಯಸುತ್ತಾರೆಯೇ ಎಂದು ಸಹ ಸೂಚಿಸಬಹುದು ಎಂದು ಇಲ್ಲಿ ತಿಳಿಸಲಾಗಿದೆ. **ಆಕ್ಷೇಪಣೆಗಳ ಪ್ರತಿಯನ್ನು ನಿಯಂತ್ರಣಾಧಿಕಾರಿ (ಲೆ ಮತ್ತು ಹ), ನಿಗಮ ಕಚೇರಿ, ಹೆಸ್ಕಾಂ, ನವನಗರ, ಹುಬ್ಬಳ್ಳಿ–580025** ಇವರಿಗೆ ಆಕ್ಷೇಪಣೆಗಳಿಗೆ ಉತ್ತರಗಳನ್ನು ಒದಗಿಸಲು ಕಳುಹಿಸಬಹುದು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಪರವಾಗಿ,
ಸಹಿ/–
ನಿಯಂತ್ರಣಾಧಿಕಾರಿ (ಲೆ ಮತ್ತು ಅ)
ನಿಗಮ ಕಛೇರಿ, ಹೆಸ್ಕಾಂ ಹುಬ್ಬಳ್ಳಿ –580025.

ವಾ.ಸಾ.ಇ/ಧಾರವಾಡ/ /ದೇಶಪಾಂಡೆಪಬ್ಲಿಸಿಟಿ/2025–26

Size: W16xH43